ಅಹವಾಲುಗಳನ್ನು ಪರಿಶೀಲಿಸಿ ಅರ್ಹತೆಗೆ ಅನುಗುಣವಾಗಿ ಪಡಿತರ ಚೀಟಿ ವಿತರಣೆಗೆ ಕ್ರಮ ವಹಿಸಲಾಗುತ್ತಿದೆ

ಆದ್ದರಿಂದ ಅರ್ಹ ಫಲಾನುಭವಿಗಳು ವಂಚಿತರಾಗಿರುವುದಿಲ್ಲ

ಊ) ಸಾರ್ವಜನಿಕರಿಂದ ಸ್ವೀಕರಿಸಲಾಗಿರುವ ಅಹವಾಲುಗಳ ಪೂರ್ಣ ವಿಲೇವಾರಿಯ ನಂತರ ತಾತ್ಕಾಲಿಕ ಪಡಿತರ ಚೀಟಿಗಳ ವಿತರಣೆಗೆ ಕ್ರಮ ಕೈಗೊಳ್ಳಲಾಗುವುದು ನಂತರ ಖಾಯಂ ಪಡಿತರ ಚೀಟಿಯನ್ನು ನೀಡಲಾಗುವುದು

710 (1128) ಶ್ರೀ ರವಿ ಸಿ ಟಿ (ಚಿಕ್ಕಮಗಳೂರು) – ಮಾನ್ಯ ಕೃಷಿ ಮಾರುಕಟ್ಟೆ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ರಾಜ್ಯದಲ್ಲಿ ಕೃಷಿ ಮಾರುಕಟ್ಟೆ ಪ್ರಾಂಗಣದಲ್ಲಿರುವ ರೈತ ಭವನಗಳು ಎಷ್ಟು , (ಜಿಲ್ಲಾವಾರು ವಿವರ ನೀಡುವುದು) ,

ಆ) ಚಿಕ್ಕಮಗಳೂರು ಎ ಪಿ ಎಂ ಸಿ ಯಲ್ಲಿ ರೈತ ಭವನ ಇಲ್ಲದಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ,

ಇ) ಬಂದಿದ್ದಲ್ಲಿ, ರೈತ ಭವನ ನಿರ್ಮಿಸಲು ಸರ್ಕಾರ ಕ್ರಮ ಕೈಗೊಳ್ಳುವುದೇ ,

ಈ) ಕೃಷಿಕರ ಅನುಕೂಲಕ್ಕಾಗಿ ಎ ಪಿ ಎಂ ಸಿ ಗಳಲ್ಲಿ ಶೌಚಾಲಯ, ಕುಡಿಯುವ ನೀರಿನ ಸೌಲಭ್ಯ ಕೊರತೆಯಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ,

ಉ) ಬಂದಿದ್ದಲ್ಲಿ, ಚಿಕ್ಕಮಗಳೂರು ಎ ಪಿ ಎಂ ಸಿ ಯೂ ಸೇರಿದಂತೆ ಎ ಪಿ ಎಂ ಸಿ ಗಳಲ್ಲಿ ಸೌಲಭ್ಯ ಕಲ್ಪಿಸಲು ಸರ್ಕಾರ ತೆಗೆದುಕೊಂಡಿರುವ ಕ್ರಮ ಏನು?

ಶ್ರೀ ಶರಣಬಸಪ್ಪ ದರ್ಶನಾಪುರ (ಕೃಷಿ ಮಾರುಕಟ್ಟೆ ಸಚಿವರು)

ಅ) 122 ರೈತಭವನಗಳು ಇವೆ ಜಿಲ್ಲಾವಾರು ಮಾಹಿತಿಯನ್ನು ಅನುಬಂಧದಲ್ಲಿ ನೀಡಿದೆ

ಆ) ರೈತಭವನ ಇದೆ

ಇ) ಉದ್ಭವಿಸುವುದಿಲ್ಲ

ಈ) ಹೌದು

ಕೃಷಿ ಉತ್ಪನ್ನ ಮಾರುಕಟ್ಟೆ ಸಮಿತಿ ಪ್ರಾಂಗಣಗಳಲ್ಲಿ ಶೌಚಾಲಯ, ಕುಡಿಯುವ ನೀರಿನ ಸೌಲಭ್ಯ ಇತ್ಯಾದಿ ಮೂಲಭೂತ ಸೌಕರ್ಯಗಳನ್ನು ಸಮಿತಿಗಳ ಆರ್ಥಿಕ ಪರಿಸ್ಥಿತಿಗೆ ಅನುಗುಣವಾಗಿ ಅವಶ್ಯಕತೆಗನುಸಾರ ಒದಗಿಸಲಾಗುತ್ತಿದೆ

ಊ) ಕೃಷಿ ಉತ್ಪನ್ನ ಮಾರುಕಟ್ಟೆ ಸಮಿತಿ, ಚಿಕ್ಕಮಗಳೂರು ಮಾರುಕಟ್ಟೆ ಪ್ರಾಂಗಣದಲ್ಲಿ ಕುಡಿಯುವ ನೀರು ಮತ್ತು ಶೌಚಾಲಯ ಸೌಲಭ್ಯಗಳನ್ನು ಒದಗಿಸಲಾಗಿದೆ

ಅನುಬಂಧ

ರಾಜ್ಯದಲ್ಲಿ ಕೃಷಿ ಉತ್ಪನ್ನ ಮಾರುಕಟ್ಟೆ ಸಮಿತಿಯಲ್ಲಿರುವ ರೈತ ಭವನಗಳ ಜಿಲ್ಲಾವಾರು ಸಂಖ್ಯೆಯ ವಿವರಗಳು ಈ ಕೆಳಕಂಡಂತಿವೆ

ಕ್ರಮ ಸಂಖ್ಯೆ	ಜಿಲ್ಲೆಯ ಹೆಸರು	ರೈತ ಭವನಗಳ ಸಂಖ್ಯೆ
1	ಬೆಂಗಳೂರು ನಗರ	01
2	ಬೆಂಗಳೂರು ಗ್ರಾಮಾಂತರ	02
3	ಚಿತ್ರದುರ್ಗ	03
4	ದಾವಣಗೆರೆ	03
5	ಕೋಲಾರ	07
6	ಶಿವಮೊಗ್ಗ	04
7	ತುಮಕೂರು	07
8	ಚಿಕ್ಕಮಗಳೂರು	04
9	ಕೊಡಗು	02
10	ಹಾಸನ	05
12	ಮೈಸೂರು	08
13	ಚಾಮರಾಜನಗರ	03
14	ದಕ್ಷಿಣ ಕನ್ನಡ	03
15	ಉಡುಪಿ	02
16	ಬೆಳಗಾಂ	09
17	ಧಾರವಾಡ	02

18	ಗದಗ	06
19	ಹಾವೇರಿ	07
20	ಬಿಜಾಪುರ	07
21	ಬಾಗಲಕೋಟೆ	05
22	ಉತ್ತರ ಕನ್ನಡ	06
23	ಬಳ್ಳಾರಿ	02
24	ಬೀದರ್	04
25	ಗುಲ್ಬರ್ಗಾ	08
26	ರಾಯಚೂರು	03
27	ಕೊಪ್ಪಳ	04
	ಒಟ್ಟು	122

711 (975) ಶ್ರೀ ಶಿವಶಂಕರ್‌ರೆಡ್ಡಿ ಎನ್ ಹೆಚ್ (ಗೌರಿಬಿದನೂರು) – ಮಾನ್ಯ ಕೃಷಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ರಾಷ್ಟ್ರದ ಮತ್ತು ರಾಜ್ಯದ ಕೃಷಿ ಆದಾಯ ಕಡಿಮೆಯಾಗುತ್ತಿದ್ದು, ರಾಷ್ಟ್ರದ ಜಿ ಡಿ ಪಿ ಯಲ್ಲಿ ಒಂದು ಶತಾಂಶಕ್ಕಿಂತ ಕಡಿಮೆ ಇರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ,

ಆ) ಇದರ ಬಗ್ಗೆ ಕರ್ನಾಟಕ ರಾಜ್ಯ ರೈತರಿಗಾಗಿ ಹಾಕಿಕೊಂಡ ಕಾರ್ಯಕ್ರಮಗಳೇನು ,

ಇ) ಕೇವಲ ಕಣ್ಣೊರೆಸುವ ಕಾರ್ಯಕ್ರಮಗಳಿಗಿಂತ ದೂರದೃಷ್ಟಿಯ ಕೃಷಿ ಉತ್ಪನ್ನಗಳ ಹೆಚ್ಚಳಕ್ಕೆ ಸರ್ಕಾರ ಕ್ರಮ ಕೈಗೊಳ್ಳುವುದೇ ?

ಶ್ರೀ ಬಂಡೆಪ್ಪ ಕಾಶಂಪೂರ್ (ಕೃಷಿ ಸಚಿವರು)

ಅ) ಬಂದಿದೆ

ಆ) ಕೃಷಿ ಆದಾಯವನ್ನು ಹೆಚ್ಚಿಸಲು ಹಾಗೂ ರಾಷ್ಟ್ರದ ಮತ್ತು ರಾಜ್ಯದ ಜಿ ಡಿ ಪಿ ಯಲ್ಲಿ ಕೃಷಿ ವಲಯದ ಪಾಲನ್ನು ಹೆಚ್ಚಿಸುವ ದೃಷ್ಟಿಯಿಂದ ಕರ್ನಾಟಕ ರಾಜ್ಯ ಪ್ರಸ್ತುತ ಸಾಲಿನಲ್ಲಿ ರೈತ ಕೇಂದ್ರಿತ ಹೊಸ ಕೃಷಿ ನೀತಿಯನ್ನು ರೂಪಿಸಿ ಅನುಷ್ಠಾನಗೊಳಿಸಲು ಸೂಕ್ತ ಕ್ರಮಗಳನ್ನು ಕೈಗೊಂಡಿದೆ